ಸಿಸಿ ಸಂಃ 1319/2017

**2 ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು : ಮಹೇಶ್ | ಪಿ ಡಬ್ಲ್ಯೂ -3 ಸಿ ಡಬ್ಲ್ಯೂ -2 |
| ತಂದೆ / ಗಂಡನ ಹೆಸರುಃ ಮುನಿಕೆಂಪಣ್ಣ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ: 16.07.2025 |
| ವಯಸ್ಸುಃ 45 ವರ್ಷ | |
| ವೃತ್ತಿಃ ವ್ಯಾಪರ | |
| ವಾಸ ಸ್ಥಳಃ ಇಟ್ಟಸಂದ್ರ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>**

ಚಾ.ಸಾ.1 ರವರು ನನ್ನ ತಂದೆಯಾಗಬೇಕು. ಚಾ.ಸಾ.3 ಮತ್ತು 4 ರವರ ಪರಿಚಯವಿರುತ್ತದೆ. ನನಗೆ ಆರೋಪಿಯ ಪರಿಚಯ ಇರುತ್ತದೆ. ದಿ:08.03.2017 ಸಂಜೆ 7:30 ಗಂಟೆ ಸಮಯದಲ್ಲಿ ನಮಗೆ ಸೇರಿದ ಇಟ್ಟಸಂದ್ರ ಗ್ರಾಮದ ಸರ್ವೆ ನಂ.79/3 ರಲ್ಲಿ 1 ಎಕರೆ 17 ಗುಂಟೆ ಜಮೀನಿನಲ್ಲಿ ಆರೋಪಿ ಮುಳ್ಳುತಂತಿ ಬೇಲಿಯನ್ನು ಹಾಕುತ್ತಿದ್ದರು. ಆ ಸಮಯದಲ್ಲಿ ನಾನು ಹೋಗಿ ಆರೋಪಿಯನ್ನು ಏಕೆ ನಮ್ಮ ಜಮೀನಿನಲ್ಲಿ ಮುಳ್ಳುತಂತಿ ಬೇಲಿಯನ್ನು ಹಾಕುತ್ತಿದ್ದಿರಾ ಎಂದು ಕೇಳಿದ್ದಕ್ಕೆ ನಮ್ಮ ಜಮೀನಿನಲ್ಲಿ ನಾವು ಬೇಲಿ ಹಾಕುತ್ತಿದ್ದೇವೆ ಏನು ಮಾಡಿಕೊಳ್ಳುತ್ತಿರಾ ಮಾಡಿಕೊಳ್ಳಿ ಎಂದು ಹೇಳಿದರು. ಅದಕ್ಕೆ ನಾನು ನನ್ನ ತಂದೆಯವರಿಗೆ ಕರೆ ಮಾಡಿ ಹೇಳಿ ಪೋಲಿಸ್ ಠಾಣೆಗೆ ದೂರು ನೀಡಲು ಹೇಳಿರುತ್ತೇನೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :</u>**

ಸರ್ವೆ ನಂ.79/3 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ನಮ್ಮ ತಂದೆಯವರು ಖರೀದಿ ಮಾಡಿರುತ್ತಾರೆ. ಸರ್ವೆ ನಂ.79/3 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ಹೊರತುಪಡಿಸಿ, ಇನ್ನು ಎಷ್ಟು ಜಮೀನುಗಳಿವೆ ಎಂದರೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ

ನಂ.79/3 ರಲ್ಲಿ 2 ನೇ ಆರೋಪಿಗೆ ಸೇರಿದ 28 ½ ಗುಂಟೆ ಜಮೀನು ಮತ್ತು ಶಾಮಣ್ಣನವರಿಗೆ ಸೇರಿದ 28 ½ ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ 28 ½ ಗುಂಟೆ ಜಮೀನಿನಲ್ಲಿ 2 ನೇ ಆರೋಪಿ 1945 ರಿಂದ ಮತ್ತು ನಾವು ಜಮೀನನ್ನು ಖರೀದಿಸುವ ಮೊದಲಿನಿಂದಲೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಅವರ ಜಮೀನಾದ 28 ½ ಗುಂಟೆ ಜಮೀನಿನಲ್ಲಿ ತಂತಿ ಬೇಲಿ ಹಾಕುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ 1 ನೇ ಆರೋಪಿ ತಂತಿ ಬೇಲಿ ಹಾಕುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳಿರುವುದಿಲ್ಲ. ದಿ:08.03.2017 ರಂದು ರಾತ್ರಿ ಸುಮಾರು 7:15 ಗಂಟೆ 1 ನೇ ಆರೋಪಿ ನಮ್ಮ ಜಮೀನಿನಲ್ಲಿ ತಂತಿ ಬೇಲಿ ಹಾಕುತ್ತಿದ್ದರು. ನಾನೇ ಜಮೀನಿಗೆ ಆ ಸಮಯದಲ್ಲಿ ಖುದ್ದಾಗಿ ಹೋಗಿರುತ್ತೇನೆ. ಸಂಜೆ 7:30 ಸಮಯದಲ್ಲಿ ಯಾವುದೇ ಒಬ್ಬ ವ್ಯಕ್ತಿ ತಂತಿ ಬೇಲಿಯನ್ನು ಹಾಕುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವ ರೀತಿಯಲ್ಲಿ 1 ನೇ ಆರೋಪಿ ನಮ್ಮ ಜಮೀನಿನಲ್ಲಿ ಯಾವುದೇ ತಂತಿ ಬೇಲಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯವರಿಗೆ ಸಂಜೆ 7:30 ಸಮಯದಲ್ಲಿ ಕರೆ ಮಾಡಿರುತ್ತೇನೆ. ಯಾವ ದಿನ ದೂರನ್ನು ನನ್ನ ತಂದೆ ನೀಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಆರೋಪಿಗಳು ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿರುವುದಿಲ್ಲ ಮತ್ತು ಅಕ್ರಮ ಪ್ರವೇಶ ಮಾಡಿ ಯಾವುದೇ ತಂತಿ ಬೇಲಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಜಮೀನು ನಮ್ಮ ಜಮೀನಿನ ಪಕ್ಕದಲ್ಲೇ ಇರುವುದರಿಂದ ಅವರ ಜಮೀನನ್ನು ಒತ್ತುವರಿ ಮಾಡಲು ಉದ್ದೇಶಪೂರ್ವಕವಾಗಿ ಅರೋಪಿಗಳ ವಿರುದ್ದ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿ:13.03.2017 ರಲ್ಲಿ ಬೆಳಗ್ಗೆ 10:.30 ಗಂಟೆ ಸಮಯದಲ್ಲಿ ಪೋಲಿಸರು ಮಹಜರು ಮಾಡಲು ಸ್ಥಳಕ್ಕೆ ಬಂದಾಗ ಹೇಳಿಕೆಯನ್ನು

ನೀಡಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಚಾ.ಸಾ.1 ರವರು ನನ್ನ ತಂದೆಯಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್.ಸಿ, ಹೊಸಕೋಟೆ.